


### ಉಪಯುಕ್ತ ಮಾಹಿತಿ

ಕೆಎಎಸ್, ಐಎಎಸ್ ಸಿದ್ಧತೆ ಹೇಗೆ? ಬೇದ್ರೆ ಮಂಜುನಾಥರ ಲೇಖನ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಅಗತ್ಯ, ಉಪಯುಕ್ತ ಮಾಹಿತಿ ನೀಡಿದೆ. ತಮ್ಮ ಮಕ್ಕಳನ್ನು ವೈದ್ಯಕೀಯ, ಎಂಜಿನಿಯರಿಂಗ್‌ಗೆ ಮಾತ್ರ ಕಳಿಸಬೇಕು ಎನ್ನುವ ಪೋಷಕರು ಇತ್ತ ಗಮನ ಹರಿಸುವಂತೆ ಬರೆದಿದ್ದಾರೆ.

ಪ್ರಜ್ವಲ್ ಪಿ. ಬುರ್ಲಿ, ದಾವಣಗೆರೆ/ ಕೆ.ಆರ್. ರೀತೇಶ್, ಲತಾ, ಮೈಸೂರು/ಸತೀಶ ಶೆಟ್ಟಿಗಾರ್, ಜಪ್ತಿ/ವಿಭಾ ಮುರಳೀಧರ್, ತುಮಕೂರು/ ಎಚ್.ಎಸ್.ವಿಶ್ವನಾಥ್, ಶಿವಮೊಗ್ಗ

### ಸಕಾಲಿಕ

'ಬೇವು-ಬೆಲ್ಲ' ಬಿ.ವಿ.ರಶ್ಮಿ ಲೇಖನ ಸಕಾಲಿಕವೆನಿಸಿತು.

-ರಾಜಶೇಖರ ಗೌಡ, ಕೊಟ್ಟೂರು/ ನೆ.ಲ.ರಾಂ, ಬೆಂಗಳೂರು/ ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ

### ಸುಂದರ ಚಿತ್ರಲೇಖನ

'ಭೂಗೋಳದ ಪುಟ್ಟ ಬಿಂದು ಭೂತಾನ್' ಶ್ರೀನಿವಾಸ ಜೋಕಟ್ಟೆ ಚಿತ್ರಲೇಖನ ಸುಂದರವಾಗಿತ್ತು.

-ರವೀಂದ್ರನಾಥ ಶಿ. ಯಡಹಳ್ಳಿ, ಇಲಕಲ್ಲ/ ನರೇಂದ್ರ ಸಿರಕಜೆ, ಮೈಸೂರು/ ರಾಜಾಗ್ರಜಾ, ದೊಡ್ಡಬಳ್ಳಾಪುರ

### ಚಿಂತನೆಗೆ ಗ್ರಾಸ

'ಮಾತೇ ಮುತ್ತು', 'ವಿಚಾರ ಲಹರಿ' ಅಂಕಣ ಚಿಂತನೆಗೆ ಒಳಪಡಿಸುತ್ತವೆ.

-ಎಂ.ವಿ. ಶ್ರೀನಿವಾಸ, ಚನ್ನಗಿರಿ

### ಮುದ ನೀಡಿದ ಮುತ್ತುಗ

ಅದೀಬ್ ಅಖ್ತರ್‌ರ ಚಿತ್ರಲೇಖನ 'ನವಪಲ್ಲವ' ಚಿತ್ರದಲ್ಲಿಯ ಮುತ್ತುಗದ ಹೂಗಳು ಸುಂದರವಾಗಿದ್ದು ಮನಕ್ಕೆ ಮುದ ನೀಡಿದವು.

-ಎಚ್.ಎಂ. ಕಾಳಮ್ಮ, ಬಸರಕೋಡು

### ನಂಬಲಾಗುತ್ತಿಲ್ಲ

ಚಿರತೆಯ ಸ್ವಾದಿಷ್ಟ ಆಹಾರ ಜಿಂಕೆ. ಆದರೆ ಜಿಂಕೆಯೊಡನೆ ಅದರ ಚೆಲ್ಲಾಟ ನಂಬಲಾಗುತ್ತಿಲ್ಲ.

- ಕೋಟೀಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

### ಚಿರತೆ ಅಲ್ಲ ಚೀತಾ

'ಫೋಟೋ ಫಿನಿಶ್' ಶೀರ್ಷಿಕೆಯಡಿ ಇರುವ ಫೋಟೋಗಳಲ್ಲಿರುವುದು ಚಿರತೆ ಅಲ್ಲ, ಅದು ಚೀತಾ. ಚಿರತೆಗೆ ಮೈಮೇಲೆ ಗುಂಪಾದ ಮಚ್ಚೆಗಳಿರುತ್ತವೆ. ಆದರೆ ಚೀತಾಕ್ಕೆ ಒಂಟಿ ಚುಕ್ಕೆಗಳಿದ್ದು, ಕಣ್ಣಿನಿಂದ ಬಾಯಿಯವರೆಗೆ ಕಪ್ಪುಗೆರೆ ಇದೆ. ಇದನ್ನು 'ಕಣ್ಣೀರಿನ ಗೆರೆ' ಎನ್ನುತ್ತಾರೆ. ಇದು ಚೀತಾದ ಪ್ರಮುಖ ಲಕ್ಷಣ.

-ಎಸ್.ವಿ. ಶ್ರೀನಿವಾಸಮೂರ್ತಿ, ಮೆಣಸೆ

### ಕೆರೆಮನೆ ಗ್ರಂಥ ಪ್ರಶಸ್ತಿಗೆ ಆಹ್ವಾನ

ಸಾಗರದ ನಿಧಿ ಪ್ರಕಾಶನ 2010ನೇ ಸಾಲಿನ ಕೆರೆಮನೆ ಶಂಭುಹೆಗಡೆ ಗ್ರಂಥಪ್ರಶಸ್ತಿಗೆ 2009ರಲ್ಲಿ ಪ್ರಕಟವಾದ ಅರ್ಹ ಗ್ರಂಥವನ್ನು ಆಹ್ವಾನಿಸಿದೆ. ಯಕ್ಷಗಾನ, ದೊಡ್ಡಾಟ (ಬಯಲಾಟ), ಮೂಡಲಪಾಯ, ಪಾರಿಜಾತ, ಸಣ್ಣಾಟದ ಮಾಧ್ಯಮಗಳಿಗೆ ಸಂಬಂಧಿಸಿದ ಗ್ರಂಥಕ್ಕೆ ಇದು ಮೀಸಲಾಗಿದೆ.

ಲೇಖಕರು, ಪ್ರಕಾಶಕರು, ವಿದ್ವಾಂಸರು, ಆಸಕ್ತರು ಏ.20ರ ಒಳಗಾಗಿ ವಿವರಗಳನ್ನು ನಿಧಿ ಪ್ರಕಾಶನ, ಅಕ್ಷರ, ವಿನೋಬನಗರ, ಸಾಗರ-577401 (08183-226776; 9480012488) ಇಲ್ಲಿ ತಿಳಿಸಿದರೆ, ನಿಧಿ ಪ್ರಕಾಶನವೇ ಗ್ರಂಥದ ಪ್ರತಿಯನ್ನು ಖರೀದಿಸಿ ಪಡೆಯುತ್ತದೆ.

### ಯುಗಾದಿ ಸಂಚಿಕೆ ನಿಜಕ್ಕೂ ವಿಶೇಷ

'ಸುಧಾ ಯುಗಾದಿ ವಿಶೇಷಾಂಕ-2010' ನಿಜವಾಗಿಯೂ ವಿಶೇಷ ಎನಿಸಿದೆ. ಸರಾಗವಾಗಿ ಓದಿಸಿಕೊಂಡು ಹೋಗುವ ಲೇಖನ, ಕಥೆ, ಲಲಿತ ಪ್ರಬಂಧ, ಕವಿತೆ, ಹನಿಗವಿತೆ ಚಿತ್ರ ಸಂಪುಟ, ಓದುಗರ ವೇದಿಕೆ, ವಿದ್ಯಾರ್ಥಿ ವಿಭಾಗ, ಸಿನಿಮಾ-ಟಿವಿ ವಿಭಾಗ, ವ್ಯಂಗ್ಯ ಚಿತ್ರಗಳು... ಮತ್ತೆ ಮತ್ತೆ ಓದುತ್ತಾ ಆಸ್ವಾದಿಸಬೇಕು ಎಂಬಂತೆ ಮೂಡಿಬಂದಿವೆ.

-ಬಿ.ಎಸ್. ಸೋಲ್ಲಾಪುರೆ, ಕಮಲನಗರ, ಬೀದರ ಜಿಲ್ಲೆ

### ಅಂತರಂಗ- ಬಹಿರಂಗ

ಸುನಂದಾ ಪ್ರಕಾಶ ಕಡಮೆ ಅವರ ಕಥೆ 'ಕಂಬಗಳ ಮರೆಯಲ್ಲಿ' ಬರುವ ಮಠದ ವಿಚಾರ ಕೆಲವು ಮಠಮಾನ್ಯಗಳಲ್ಲಿ ಈಗಲೂ ಇದೆ. ಆದರೆ ಆ ಮಠಮಾನ್ಯಗಳ 'ಅಂತರಂಗ' ಹೀಗೆ ಬಹಿರಂಗಗೊಳ್ಳುವುದೇ ಅಪರೂಪ!

-ಶಂಕರೇಗೌಡ ತುಂಬಕೆರೆ, ಮಂಡ್ಯ

### ಬ್ರಹ್ಮರಾಕ್ಷಸ ಮತ್ತು ಟಿ.ಆರ್.ಪಿ.

ಎಲ್ಲಾ ಚಾನೆಲ್‌ಗಳಲ್ಲಿ ಮೆಗಾ ಧಾರಾವಾಹಿಗಳಿವೆ. ಅವು ಎಷ್ಟೇ ಬೇಸರ ತಂದರೂ ವೀಕ್ಷಕರಿಗೆ ಆಯ್ಕೆಯ ಅವಕಾಶವಿಲ್ಲ. ನಿರ್ಮಾಪಕ, ನಿರ್ದೇಶಕರಿಗೆ, ಪ್ರಾಯೋಜಕರು ಮತ್ತು ಟಿ.ಆರ್.ಪಿ. ಮುಖ್ಯವೇ ಹೊರತು ವೀಕ್ಷಕರ ಆಸಕ್ತಿಯಲ್ಲ.

-ಗೋಪಾಲ ಆಶ್ರಿತ, ಬೆಂಗಳೂರು




### ಸಿನಿಮಾ- ಶಾಸ್ತ್ರೀಯ ಪರಿಚಯ

'ಸಿನಿಮಾ ಗೀತೆಗಳಲ್ಲಿ ಶಾಸ್ತ್ರೀಯ ರಾಗ' ಉತ್ತರ-ದಕ್ಷಿಣಾದಿ ಶಾಸ್ತ್ರೀಯ ಸಂಗೀತದ ರಾಗಾಧಾರಿತ ಚಿತ್ರಗೀತೆ ಕುರಿತು ಉಮಾ ಅನಂತ್ ಲೇಖನ ಪರಿಚಯಿಸಿದೆ.

ಲೇಖನದ ಆರಂಭದಲ್ಲೇ ತಪ್ಪು ಮಾಹಿತಿಯೊಂದು ನುಸುಳಿದೆ. 'ಗುಡ್ಡಿ' ಚಿತ್ರದ 'ಬೋಲೆ ರೆ ಪಪಿ ಹರಾ' ಗೀತೆ ಹಾಡಿದವರು ಲತಾಜಿ ಅಲ್ಲ- ವಾಣಿ ಜಯರಾಂ. ಮಿಯಾ ತಾನ್‌ಸೇನ್ ಸೃಷ್ಟಿಸಿದ ಈ ಅಪೂರ್ವ ರಾಗದಲ್ಲೆ 'ಕೆಸರಿನ ಕಮಲ' ಚಿತ್ರದ 'ಹೇಳೇ ಗೆಳತಿ ಪ್ರಿಯ ಮಾಧವ ಬಾರನೆ ಇಂದು' ಗೀತೆಯೂ ಉಲ್ಲೇಖನೀಯ.

-ಅಪೇಕ್ಷಾ ಪೈ, ಮೂಡುಬಿದಿರೆ/ ಮೀರಾ ಮೋಹನ್, ಬೆಂಗಳೂರು





Himalaya HERBALS

ಸೌಂದರ್ಯದ ರಹಸ್ಯ:

ಮುಖದಕಾಂತಿಯನ್ನು ಸುಧಾರಿಸಲು ಕಡಲೆ ಹಿಟ್ಟು, ಹಾಲು ಮತ್ತು ನಿಂಬೆ ರಸದ ಮಿಶ್ರಣವನ್ನು ನಿಮ್ಮ ಮುಖಕ್ಕೆ ಹಚ್ಚಿರಿ.

ಚಿಕಿತ್ಸಾ ಸಲಹೆ

ಕಿತ್ತಳೆಯು ಕಲೆಗಳನ್ನು ತೆಗೆಯುತ್ತದೆ, ಲೋಳೆರಸವು ತ್ವಚೆಯನ್ನು ತೇವಾಂಶಗೊಳಿಸಿ ಮೃದುಗೊಳಿಸುತ್ತದೆ.

ಗುಲಾಬಿಯು ಮುಖಕಾಂತಿಯನ್ನು ಸುಧಾರಿಸಿ ನಿಮ್ಮನ್ನು ತಾಜಾ ಆಗಿಡುತ್ತದೆ.

ಈ ಎಲ್ಲಾ ಪದಾರ್ಥಗಳೂ ಹಿಮಾಲಯ ಫೇರ್‌ನೆಸ್ ಕ್ರೀಮ್‌ನಲ್ಲಿವೆ.